Downloaded From: http://iasexamportal.com

CS (Main) Exam:2015

**C-AVZ-O-LOEC**

# KANNADA

**( COMPULSORY )**

*Time allowed :* ***Three*** *Hours*

*Maximum Marks : 300*

---

**Question Paper Specific Instructions**

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in* ***KANNADA (Kannada Script)*** *unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*

---

**Q1.** **ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 600 ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ :** ***100***

(a) ಯುವಕ, ಯುವತಿಯರಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ.

(b) ಯಾವುದೇ 'ಸೋಲು' ಯಶಸ್ಸಿಗೆ ಒಂದು ಮೆಟ್ಟಿಲು.

(c) ಓದುವ ಹವ್ಯಾಸಗಳು ಈಗ ಕಡಿಮೆಯಾಗುತ್ತಿದೆಯೇ ?

(d) ಸಮಾಜದಲ್ಲಿನ ಮೂಢನಂಬಿಕೆಗಳ ವಿರುದ್ಧ ಹೋರಾಟ.



Downloaded From: http://iasexamportal.com

Downloaded From: http://iasexamportal.com

**Q2.** **ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ :** ***12×5=60***

ಭಾರತದ ಕಾಲೇಜುಗಳಿಂದ ಉತ್ತೀರ್ಣರಾಗಿ ಹೊರಗಡೆ ಬರುತ್ತಿರುವವರಲ್ಲಿ ಶೇಕಡಾ 80 ಜನ ಉದ್ಯೋಗಕ್ಕೆ ಅನರ್ಹರು ಎಂದು ವರದಿಯು ತಿಳಿಸುತ್ತದೆ. ತರುಣ ಜನಾಂಗವನ್ನು ಹತ್ತಿರದಿಂದ ಸಂಬಂಧ ಹೊಂದಿದ ನಾನು ಈ ಸಂಖ್ಯೆಯ ಬಗ್ಗೆ ಭಿನ್ನ ಮತವನ್ನು ಹೊಂದಿದ್ದೇನೆ. ಈ ಯುವ ಜನಾಂಗವನ್ನು ಸಂವಾದಿಸಿದ ನಾನು 90 ಪ್ರತಿಶತ ಈ ತರುಣರು ತಮ್ಮ ಬೇಜವಾಬ್ದಾರಿ ಮತ್ತು ಹಾರಿಕೆಯ ಗುಣಗಳಿಂದ ಉದ್ಯೋಗಕ್ಕೆ ಅನರ್ಹರಾಗುತ್ತಾರೆ ಎಂದು ಹೇಳುತ್ತೇನೆ. ಈ ತರುಣರು ಈ ಕಾಲದಲ್ಲೇ, ತಮ್ಮ ಕೆಟ್ಟ ನಡತೆಯನ್ನೇ, ಆತ್ಮ ವಿಶ್ವಾಸವೆಂದು ತಿಳಿದುಕೊಂಡಿದ್ದಾರೆ, ಅವರಿಗೆ ಹೇರಳವಾಗಿ ಹಣ ಮಾಡುವುದು ಬೇಕಾಗಿದೆಯೇ ಹೊರತು ಬೇರೇನೂ ಅಲ್ಲ.

ಅವರು ನಿರುಪಯೋಗಿ ಎಂದು ಇದರ ಅರ್ಥವಲ್ಲ. ಇವರಲ್ಲಿ ಬಹುಪಾಲು ಜನ ಒಳ್ಳೆಯ ಇಂಗ್ಲೀಷನ್ನು ಮಾತನಾಡುತ್ತಾರೆ; ಮತ್ತು ತಮಲ್ಲಿ ಆತ್ಮವಿಶ್ವಾಸ ಉಳ್ಳವರಾಗಿದ್ದಾರೆ. ಅವರಿಗೆ ಇತ್ತೀಚಿನ ರಿಂಗ್ ಟೋನ್‌ಗಳು, ಚಲನಚಿತ್ರಗಳು, ಮತ್ತು ನಗೆ ಚಟಾಕಿಗಳು ಗೊತ್ತಿರುತ್ತವೆ. ಇದರಿಂದ ಆಚೆಗೆ ಅವರನ್ನು ಏನನ್ನಾದರೂ ತಿಳಿದಿದೆಯೇ ಎಂದು ವಿಚಾರಿಸಿದರೆ, ಅವರು ಕಣ್ಣು-ಕಣ್ಣು ಬಿಟ್ಟು ಮಂದವಾದ ಕಣ್ಣುಗಳಿಂದ ನನ್ನ ಕಡೆಗೆ ನೋಡುತ್ತಾರೆ. ಮಾಧ್ಯಮಗಳ ಪ್ರಚಾರ ಮತ್ತು ನಿಯತವಾಗಿ ಪ್ರಕಟವಾಗುವ ಸಂಬಳದ ಸರ್ವೆಗಳ ಪ್ರಭಾವದಿಂದ ಬಹಳ ಹಣ ಗಳಿಸಲು ಅವರು ಇಚ್ಛಿಸುತ್ತಾರೆ. ಆದರೆ ಇಷ್ಟು ಹಣವನ್ನು ಗಳಿಸಲು ಬೇಕಾದ ಕೌಶಲ್ಯಗಳು ಅವರ ಬಳಿ ಇರುವುದಿಲ್ಲ. ಅವರ 'ಪದವಿಗಳು' ಸಂಶಯಕ್ಕೆ ಎಡೆ ಮಾಡಿಕೊಡುವಂಥವು. ಪದವಿ ವಿಷಯಗಳ ಬಗ್ಗೆ ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳಿದರೆ ಬಹುಪಾಲು ತರುಣರು ತಡವರಿಸುತ್ತಾರೆ. ಪಠ್ಯೇತರವಾದ ಯಾವ ಓದನ್ನೂ ಯಾರೂ ಓದುವ ಹಾಗೆ ಕಾಣುವುದಿಲ್ಲ. ಆದರೆ ಇಲ್ಲಿ ಇನ್ನೂ ಅನೇಕ ಪ್ರಶ್ನೆಗಳಿವೆ. ಅವರ ನೀತಿ-ನಡಾವಳಿ, ವರ್ತನೆ, ಹಾಗೂ ಅವರ ಸಾಮರ್ಥ್ಯ, ಅಲ್ಲದೆ ಅವರು ವಿರಾಮದ ಸಮಯವನ್ನು ಕಳೆಯುವ ಬಗೆ, ಇವುಗಳ ಬಗ್ಗೆ ವಿಚಾರಿಸಿದರೆ – ಈ ಆತ್ಮವಿಶ್ವಾಸದ ತರುಣರು, ತರುಣಿಯರು, ನನ್ನ ಸುತ್ತ ಅರ್ಥವಾಗದ ನೋಟ ಬೀರುತ್ತಾರೆ : "ಈ ಪ್ರಶ್ನೆಗಳಿಗೆ ನಾನು ಏನು ಉತ್ತರಿಸಬೇಕು" ?



Downloaded From: http://iasexamportal.com

Downloaded From: http://iasexamportal.com

ಇದು ಅವರ ಜೀವನ, ಅವರು ತಮ್ಮ ಬಗ್ಗೆ ಹೇಳಬೇಕು ಎನ್ನುವ ಮಾತು ಸರಿಯಾಗುವುದೇ ಇಲ್ಲವೇನೋ ? ಯಾಕೆಂದರೆ ಅವರಿಗೆ ತಾವು ಪಾಸಾಗಲು ಸಿದ್ಧಪಡಿಸಿದ ಉತ್ತರಗಳನ್ನೇ ಅವರು ಬಯಸುತ್ತಾರೆ. 'ಇದನ್ನೇ ನಾನು ಹೆಚ್ಚು ಕಾಲ ಅಭ್ಯಾಸ ಮಾಡಿದರೆ, ಅದನ್ನೇ ನಿಜವೆನ್ನುವಂತೆ ಕಾಣಿಸಬಲ್ಲೆ' – ಇದು ಅವರು ಹೇಳುವ ಮಾತು. ಕ್ಷಿಪ್ರಕಾಲದಲ್ಲಿ – ಹೀಗೆ ಮಾಡಿದರೆ ಈ ತರುಣರು ಓದುಗರೂ, ಗಿಟಾರ್ ನುಡಿಸುವವರೂ, ಅದ್ಭುತ ಕ್ರಿಕೆಟ್ ಆಟಗಾರರೂ ಅಥವಾ ಚಿತ್ರನಟರೂ ಆಗುತ್ತಾರೆಂಬ ನಂಬಿಕೆ. ಯಾರಾದರೂ ಅವರನ್ನು ಇಂಟರ್‌ವ್ಯೂ ಮಾಡುವವನು ಅವರ ಕಟ್ಟು ಕಥೆಗಳನ್ನು ನಂಬುವಷ್ಟು ಮೂರ್ಖನಾಗಲಿಕ್ಕಿಲ್ಲ.

ಭಾರತವು ಮುನ್ನಡೆಯುತ್ತಿದ್ದಂತೆ, ನಾವು ಯಾವುದನ್ನೂ ಮಾಡದೆ ಒಳ್ಳೆಯ ಜೀವನವನ್ನು ನಡೆಸಬೇಕೆನ್ನುವ ಯೋಚನಾರಹಿತ ತಲೆಮಾರನ್ನು ಸೃಷ್ಟಿಸಿದ್ದೇವೆ. ನಾವು ಯಾವುದೇ ದರ್ಶನವಿಲ್ಲದೆ, ಬದ್ಧತೆ ಅಥವಾ ನೀತಿ ಇಲ್ಲದ ಜೀವರಹಿತ ವ್ಯಕ್ತಿತ್ವಗಳನ್ನು ಸೃಷ್ಟಿಸುತ್ತಿದ್ದೇವೆ ಎಂದು ಅನ್ನಿಸುತ್ತಿದೆ. ಯಾವುದಾದರೂ ಮಹತ್ವದ್ದನ್ನು ಮಾಡಬೇಕು ಅಥವಾ ಯಾವುದರಿಂದಲಾದರೂ ಮೊವೊದಲು ತಪ್ಪಿಸಿಕೊಳ್ಳಬೇಕು ಎಂಬ ಆಯ್ಕೆಯನ್ನು ಮುಂದೆ ಇಟ್ಟರೆ ನಮ್ಮ ತರುಣ ಜನಾಂಗವು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ವಿಷಯವನ್ನೇ ಆಯ್ದು ಕೊಳ್ಳುತ್ತಾರೆ. ತರುಣರಿದ್ದಾಗ ನಿಮ್ಮಲ್ಲಿ ಆದರ್ಶಗಳಿರುತ್ತವೆ; ನಿಮ್ಮ ವಿಚಾರಗಳು ಯಾವುದೇ ಅರ್ಥವನ್ನು ನೀಡಲು ಅಶಕ್ಯ ಇರಬಹುದು; ಆದರೆ ನೀವು ಒಂದು ಒಳ್ಳೆಯ ಕಾರಣಕ್ಕೆ ಎದ್ದು ನಿಲ್ಲಲು ಇಚ್ಛಿಸಿರುತ್ತೀರಿ. ಇತ್ತೀಚಿನ ದಿನಗಳಲ್ಲಿ ತರುಣ ಜನಾಂಗವು ಯಾವುದೇ ಆದರ್ಶಗಳ ಬಗ್ಗೆಯೂ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಈ ಜನಾಂಗದ ಬಾಯಿಪಾಠ ಮಾಡಿದ ಮಾತುಗಳನ್ನೇ ಕೇಳುವುದಾದರೆ ಅವರ ಹೊಸ ಮಂತ್ರವು ಹಣ ಮಾಡುವುದೇ ಆಗಿದೆ. ಯಾರಾದರೂ ಅರ್ಥಪೂರ್ಣವಾದದ್ದನ್ನು ಮಾತನಾಡಿದರೆ ಅವರು ಹಳಬರಂತೆ ಕಾಣುತ್ತಾರೆ.

**ಪ್ರಶ್ನೆಗಳು :**

(a) ತರುಣರನ್ನು ಉದ್ಯೋಗಕ್ಕೆ ಅನರ್ಹರನ್ನಾಗಿ ಮಾಡಿರುವ ಕಾರಣಗಳೇನು ? *12*

(b) ಈ ಬರಹಗಾರನಿಂದ ತರುಣರು ಬಯಸುವುದು ಏನನ್ನು ? *12*

(c) ಈ ಬರಹಗಾರನ ಪ್ರಕಾರ ಇಂದಿನ ತರುಣ ಜನಾಂಗದ ಏಕೈಕ ಉದ್ದೇಶ ಏನು ? *12*

(d) ಇಂದಿನ ತರುಣರು ಪರಿಗಣಿಸುವ ಹೊಸ ಮಂತ್ರ ಯಾವುದು ? *12*

(e) ಆದರ್ಶವಾದವನ್ನು ಕುರಿತಂತೆ ಇಂದಿನ ತರುಣರು ತಳೆದ ನಿಲುವುಗಳೇನು ? *12*



Downloaded From: http://iasexamportal.com

Downloaded From: http://iasexamportal.com

**Q3. ಈ ಕೆಳಗಿನ ಭಾಗವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದರ ಶೀರ್ಷಿಕೆಯನ್ನು ಸೂಚಿಸುವ ಅವಶ್ಯಕತೆಯಿಲ್ಲ. ಸಂಗ್ರಹವು ನಿಮ್ಮದೇ ಭಾಷೆಯಲ್ಲಿ ಇರಲಿ.** ***60***

ಆರ್ಥಿಕ ಮತ್ತು ಸ್ಟ್ರೆಟೆಜಿಕ್ ಕಾರಣಗಳಿಗಾಗಿ, ರಕ್ಷಣೆಯ ವಿಷಯದಲ್ಲಿ ಪರದೇಶಗಳನ್ನು ಕಡಿಮೆ ಅವಲಂಬಿಸಿ, ಸ್ವಾವಲಂಬನೆಯ ಕಡೆಗೆ ಸಾಧನೆಯನ್ನು ಮಾಡುವುದು ಈಗ ಆಯ್ಕೆಗಿಂತ ಹೆಚ್ಚಾಗಿ ಅವಶ್ಯಕವಾಗಿದೆ. ಸರ್ಕಾರವು ಈ ಹಿಂದೆ ನಮ್ಮ ಸೇನೆಯ ಅವಶ್ಯಕತೆಗಳನ್ನು ಪೂರೈಸಲು, ರಕ್ಷಣೆಯ ಉತ್ಪಾದನಾ ಸಾಮರ್ಥ್ಯಗಳನ್ನು ರೂಪಿಸುವ ನೆಲೆಯಲ್ಲಿ ಪರವಾನಗಿ ಪಡೆದ ಕೈಗಾರಿಕೋದ್ಯಮಗಳು ಹಾಗೂ ಸಾರ್ವಜನಿಕ ಕೈಗಾರಿಕಾ ಕೇಂದ್ರಗಳನ್ನೂ ರೂಪಿಸಿತ್ತು. ಆದಾಗ್ಯೂ ಈಗ ಭಾರತೀಯ ಖಾಸಗಿ ವಲಯದ ಪಾತ್ರವನ್ನು ಹೆಚ್ಚಿಸುವ, ಹಾಗೂ ಅನೇಕ ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ಇವುಗಳ ಸಾಮರ್ಥ್ಯ ಹಾಗೂ ಸಿದ್ಧತೆಯನ್ನು ಬೆಳೆಸುವ ಅವಶ್ಯಕತೆ ಇದೆ. ಅನೇಕ ಸಾಮಗ್ರಿಗಳ ಸ್ವದೇಶೀಯ ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸುವ ದೃಷ್ಟಿಯಿಂದ, ಬಹುಮುಖ್ಯವಾದ ಪ್ರಯತ್ನವನ್ನು 'ಮೇಕ್ ಇನ್ ಇಂಡಿಯಾ' ರೂಪದಲ್ಲಿ ಈಗ ಕೈಗೊಳ್ಳಲಾಗುತ್ತಿದೆ. ರಕ್ಷಣಾಸಾಮಗ್ರಿಗಳ ಸ್ವದೇಶಿಯ ಉತ್ಪಾದನೆಯಲ್ಲಿ ಈ ಪ್ರಯತ್ನವು ಈಗ ಉಳಿದೆಲ್ಲ ವಿಭಾಗಗಳ ಉತ್ಪಾದನೆಗಿಂತ ಬಹಳ ಮುಖ್ಯವಾಗಿದೆ. ಏಕೆಂದರೆ ಇದು ವಿದೇಶೀ ವಿನಿಮಯದ ಖರ್ಚನ್ನು ಉಳಿಸುವುದಷ್ಟೇ ಅಲ್ಲದೆ, ರಾಷ್ಟ್ರೀಯ ಸುರಕ್ಷತೆಯ ಕಾಳಜಿಯನ್ನೂ ಇದು ಗಮನಿಸುತ್ತದೆ.

ರಕ್ಷಣಾವಿಭಾಗದ 'ಮೇಕ್ ಇನ್ ಇಂಡಿಯಾ' ಪ್ರಯತ್ನವು ನಮ್ಮ ಅವಶ್ಯಕತೆಯ ನೀತಿಯನ್ನು, ಪ್ರಧಾನವಾಗಿ ಅವಲಂಬಿಸಿದೆ; ಏಕೆಂದರೆ ಸರ್ಕಾರ ಮಾತ್ರವೇ ಇಲ್ಲಿ ಗ್ರಾಹಕನಾಗಿದೆ. ರಕ್ಷಣಾ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ಸರ್ಕಾರದ ನೀತಿಯಲ್ಲಿ – 'ಜಾಗತೀಕರಣವಾದದ್ದನ್ನು ಕೊಳ್ಳು' ಎನ್ನುವುದಕ್ಕಿಂತ, 'ಭಾರತೀಯವಾದದ್ದನ್ನು ಕೊಳ್ಳು' ಮತ್ತು 'ಭಾರತೀಯವಾದದ್ದನ್ನು ಕೊಳ್ಳು ಮತ್ತು ಮಾರು' – ಇದು ಪ್ರಧಾನವಾಗಿ ರಕ್ಷಣಾ ಸಾಮಗ್ರಿಯ ಖರೀದಿಯ ನೀತಿಯಾಗಿ ಎದ್ದು ಕಾಣುತ್ತಿದೆ. ಮುಂದಿನ ದಿನಗಳಲ್ಲಿ ಅವಶ್ಯಕವಾದ ಸಾಮಗ್ರಿಗಳನ್ನು ತಯಾರಿಸುವ ಮತ್ತು ಅಭಿವೃದ್ಧಿ ಪಡಿಸುವ ದಿಸೆಯಲ್ಲಿ ಭಾರತೀಯ ಕೈಗಾರಿಕೆಗಳಿಗೆ ಮೊದಲ ಅವಕಾಶವನ್ನು ನೀಡುವ ಅವಕಾಶವು ಹೆಚ್ಚಾಗಿ, 'ಆಮದು' ಎನ್ನುವುದು ಅಪರೂಪದ ಸಂಗತಿಯಾಗುವ ಸಾಧ್ಯತೆ ಇದೆ. ಭಾರತೀಯ ಕಂಪನಿಗಳು ಈಗ ತಂತ್ರಜ್ಞಾನದ ದೃಷ್ಟಿಯಿಂದ ಅವಶ್ಯಕವಾದ ಸಾಮರ್ಥ್ಯವನ್ನು ಇನ್ನೂ ಹೊಂದದೇ



Downloaded From: http://iasexamportal.com

Downloaded From: http://iasexamportal.com

ಇರುವುದರಿಂದ, ಸಧ್ಯಕ್ಕೆ ವಿದೇಶೀಯ ಕಂಪನಿಗಳ ಜೊತೆಗೆ ಅವುಗಳು ಜೊತೆಗಾರರಾಗಿದ್ದು, ತಂತ್ರಜ್ಞಾನದ ಸ್ಥಳಾಂತರದ ಸಿದ್ಧತೆ ಹಾಗೂ ಒಪ್ಪಂದಗಳನ್ನು ಮಾಡಿಕೊಳ್ಳುವ ನೆಲೆಯಲ್ಲಿ ಉತ್ತೇಜನವನ್ನೂ ಕೊಡಲಾಗುತ್ತಿದೆ.

ಇದುವರೆಗೆ ಸ್ವದೇಶೀಯ ಕೈಗಾರಿಕೆಗಳಿಗೆ ರಕ್ಷಣಾ ವಿಭಾಗದಲ್ಲಿ ಒಪ್ಪಂದ ಮಾಡಿಕೊಳ್ಳಲು ಲೈಸೆನ್ಸಿಂಗ್, ಎಫ್.ಡಿ.ಐ. ಪಾಲಿಸಿ ನಿಬಂಧನೆಗಳು - ಮುಂತಾಗಿ ಹಲವಾರು ತೊಡಕುಗಳು ಇದ್ದವು. ಈಗ ಅನೇಕ ಬಗೆಯ ನೀತಿನಿಯಮಗಳನ್ನು ರಕ್ಷಣಾ ಉತ್ಪಾದನೆಗೆ ಸಂಬಂಧಿಸಿದಂತೆ ಮಾಡಲಾಗುತ್ತಿದ್ದು, ಸ್ವದೇಶಿಯ ಕಂಪನಿಗಳು ಈಗ ಒಪ್ಪಂದಗಳನ್ನು ಮಾಡಿಕೊಳ್ಳುವಂತಾಗುತ್ತಿದೆ. ಪ್ರಮುಖವಾದದ್ದು ಎಂದರೆ ರಕ್ಷಣಾ ವಿಭಾಗದಲ್ಲಿ ಹೊರದೇಶದ ಹೂಡಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಎಫ್.ಡಿ.ಐ. ಪಾಲಿಸಿಯ ರೆಜೀಮನ್ನು ಉದಾರೀಕರಣಗೊಳ್ಳಿಸಲಾಗಿದೆ. ಲೈಸೆನ್ಸಿಂಗ್ ಪಾಲಿಸಿಯನ್ನೂ ಈಗ ಉದಾರೀಕರಣಗೊಳ್ಳಿಸಿರುವುದರಿಂದ, ಬಹುತೇಕ ಸಾಮಗ್ರಿಗಳು, ಕಚ್ಚಾ ಪದಾರ್ಥಗಳು, ಪರೀಕ್ಷಣೆಯ ಸಾಮಗ್ರಿಗಳು, ಉತ್ಪಾದನಾ ಯಂತ್ರ ಮುಂತಾದವುಗಳನ್ನು ಲೈಸೆನ್ಸಿಂಗ್ ವಲಯದಿಂದ ಆಚೆಗೆ ಇಡಲಾಗಿದೆ. ಇಂಥ ಸಾಮಗ್ರಿಗಳನ್ನು ಉತ್ಪಾದಿಸುವ ಕಂಪನಿಗಳು ಈಗ ಕೈಗಾರಿಕಾ ಲೈಸೆನ್ಸ್‌ನ್ನು ಪಡೆಯಬೇಕಾದ ಅವಶ್ಯಕತೆ ಇಲ್ಲ.

ರಕ್ಷಣಾ ವಿಭಾಗದಲ್ಲಿ ಸ್ವದೇಶೀಯ ಹಾಗೂ ಹೊರದೇಶೀಯ ಹೂಡಿಕೆದಾರರಿಗೆ ಈಗ ದೊಡ್ಡ ಸದವಕಾಶ ಲಭ್ಯವಾಗಿದೆ. ಸರ್ಕಾರವು ಒಂದು ಕಡೆಗೆ, ಹೂಡಿಕೆ ಹಾಗೂ ಪಡೆಯುವ ವಲಯದಲ್ಲಿ ಎಫ್.ಡಿ.ಐ.; ಲೈಸೆನ್ಸಿಂಗ್, ರಫ್ತು ಮುಂತಾದ ನೀತಿ-ನಿಯಮಗಳಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ಮಾಡುತ್ತಿದ್ದು, ನಮ್ಮ ಕೈಗಾರಿಕೆಗಳೂ ತಂತ್ರಜ್ಞಾನ ಹಾಗೂ ಅವಶ್ಯಕವಾದ ಹೂಡಿಕೆಗಳ ವಿಷಯದಲ್ಲಿ ಉನ್ನತ ಮಟ್ಟಕ್ಕೆ ಏರುವ-ಸವಾಲುಗಳನ್ನು ಸ್ವೀಕರಿಸುವ ಅವಶ್ಯಕತೆ ಇದೆ.

ರಕ್ಷಣಾ ವಿಭಾಗವು ಉನ್ನತತಂತ್ರಜ್ಞಾನ ಹಾಗೂ ಅಧಿಕ ಬಂಡವಾಳ ಹೂಡಿಕೆಯ ವಲಯವಾಗಿದೆ. ಹೊಸ ಆವಿಷ್ಕಾರಗಳ ಅವಶ್ಯಕತೆ ಇಲ್ಲಿ ಬೇಕಾಗಿದೆ. ಆದ್ದರಿಂದ ಕೈಗಾರಿಕೆಯು ಇಲ್ಲಿ-ತಾತ್ಕಾಲಿಕ ಲಾಭಕ್ಕಿಂತ ಹೆಚ್ಚಾಗಿ, ಅಧಿಕ ಕಾಲದ ಪ್ರಯೋಜನದ ಚಿಂತನೆಯನ್ನು ಮಾಡಬೇಕಾಗಿದೆ. ಈಗಿನ ತನ್ನ ಸಾಂಪ್ರದಾಯಿಕ ಯೋಚನಾ ವಿಧಾನವನ್ನು ಕೈಬಿಡಬೇಕಾಗಿದೆ. ನಾವು ಈಗ ಹೆಚ್ಚೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿಯ ಹಾಗೂ ಉತ್ಪಾದನಾ ಸಾಮರ್ಥ್ಯಗಳ



Downloaded From: http://iasexamportal.com

Downloaded From: http://iasexamportal.com

ಹೊಸ ವಿನ್ಯಾಸಗಳ ಕಡೆಗೆ ಮುಖ ಮಾಡಬೇಕಾಗಿದೆ. ಸ್ವದೇಶೀಯ ಕೈಗಾರಿಕೆಗೆ ಈಗ ಹೊಸ ವಾತಾವರಣವನ್ನು ಸೃಷ್ಟಿಗೊಳ್ಳಿಸುವ ಕಡೆಗೆ ದೃಷ್ಟಿ ಹಾಯಿಸಿ, ಸಾರ್ವಜನಿಕ ಹಾಗೂ ಖಾಸಗೀ ಕ್ಷೇತ್ರದ ಕೈಗಾರಿಕೆಗಳು ಈ ಹೊಸ ಸಾಹಸದಲ್ಲಿ ಅತ್ಯುತ್ತಮ ಪಾಲುದಾರಿಕೆಯನ್ನು ಹೊಂದುವಂತೆ ಮಾಡುವ ಅವಶ್ಯಕತೆ ಇದೆ. (357 ಶಬ್ದ)

**Q4. ಈ ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿ :** *20*

ಅರೇಬಿಯಾದ ಬಹುಭಾಗ ಮರುಭೂಮಿ ಇದೆ. ಇಲ್ಲಿ ಮರಳು ಮತ್ತು ಕಲ್ಲು ಬಿಟ್ಟರೆ ಮತ್ತೇನೂ ಇಲ್ಲ, ಇಲ್ಲಿಯ ಮರಳು ಎಷ್ಟು ಬಿಸಿಯೆಂದರೆ, ಹಗಲಿನಲ್ಲಿ ನೀವು ಬರಿಕಾಲಿನಲ್ಲಿ ನಡೆಯಲು ಸಾಧ್ಯವೇ ಇಲ್ಲ. ಈ ಮರುಭೂಮಿಯಲ್ಲಿ ಅಲ್ಲಿ, ಇಲ್ಲಿ, ಭೂಮಿಯ ಆಳದಿಂದ ಬರುವ ನೀರಿನ ಚಿಲುಮೆಗಳಿವೆ – ಇವು ಎಷ್ಟು ಆಳವೆಂದರೆ ಸೂರ್ಯನ ಕಿರಣಗಳು ಇವುಗಳನ್ನು ಒಣಗಿಸಲು ಸಾಧ್ಯವಿಲ್ಲದಷ್ಟು. ಈ ನೀರಿನ ಚಿಲುಮೆಗಳು ಕೆಲವೇ ಕೆಲವು ಇವೆ; ಮತ್ತು ಇವುಗಳ ನಡುವಣ ಅಂತರವೂ ಬಹಳಷ್ಟು ಇದೆ. ಆದರೆ ಇವುಗಳು ಎಲ್ಲೆಲ್ಲಿ ಇದ್ದಾವೊ, ಅಲ್ಲೆಲ್ಲ, ಮರಗಳು ಬಹಳ ಎತ್ತರ ಬೆಳೆದಿ¬ೆ, ಸುಂದರವಾಗಿ ಕಾಣುತ್ತವೆ. ಅಷ್ಟೇ ಅಲ್ಲದೆ ನೀರಿನ ಚಿಲುಮೆಯ ಸುತ್ತುಲೂ ತಂಪಾದ, ಹಸಿರಿನ ನೆರಳನ್ನೂ ಕೊಡುತ್ತವೆ. ಇಂಥ ಸ್ಥಳಗಳನ್ನು 'ಓಯಸಿಸ್' ಎಂದು ಕರೆಯುತ್ತಾರೆ.

ಪಟ್ಟಣದಲ್ಲಿ ವಾಸಮಾಡದೇ ಇರುವ ಅರಬ್ಬರು ವರ್ಷಪೂರ್ತಿ ಮರುಭೂಮಿಯಲ್ಲೇ ವಾಸಿಸುತ್ತಾರೆ. ಸುಲಭವಾಗಿ ಹಾಕಬಹುದಾದ ಮತ್ತು ತೆಗೆಯಬಹುದಾದ ಟೆಂಟ್‌ಗಳಲ್ಲಿ ಅವರು ವಾಸಿಸುತ್ತ, ಒಂದು ಓಯಸಿಸ್‌ನಿಂದ ಇನ್ನೊಂದು ಓಯಸಿಸ್‌ಗೆ ಓಡಾಡುತ್ತಾರೆ; ಈ ಬಗೆಯಲ್ಲಿ ಅವರು ತಮ್ಮ ಕುರಿಗಳು, ಆಡುಗಳು, ಒಂಟೆಗಳು ಹಾಗೂ ಕುದುರೆಗಳಿಗೆ ಹುಲ್ಲು ಮತ್ತು ನೀರನ್ನು ಪಡೆಯುತ್ತಾರೆ. ಈ ಮರುಭೂಮಿಯ ಅರಬ್ಬರು – ತಾಳೆ ಮರಗಳಲ್ಲಿ ಬಿಟ್ಟಂಥ ಪಕ್ವವಾದ ಸಿಹಿ ಫಿಗ್ ಹಣ್ಣುಗಳು ಹಾಗೂ ಖರ್ಜೂರದ ಹಣ್ಣುಗಳನ್ನು ತಿನ್ನುತ್ತಾರೆ ಅವುಗಳನ್ನು ಒಣಗಿಸಿ ಅವರು ವರ್ಷಪೂರ್ತಿ ಅವುಗಳನ್ನು ಬಳಸುತ್ತಾರೆ.

ಜಗತ್ತಿನ ಅತ್ಯುತ್ತಮ ಕುದುರೆಗಳು ಈ ಅರಬ್ಬರ ಬಳಿ ಇವೆ. ತಾನು ಓಡಿಸುವ ಈ ಕುದುರೆಯನ್ನು ಅರಬ್ಬನು ತನ್ನ ಹೆಂಡತಿ, ಮಕ್ಕಳಂತೆಯೇ ಪ್ರೀತಿಸುತ್ತಾನೆ; ಮತ್ತು ತನ್ನ ಕುದುರೆಯ ಬಗ್ಗೆ ಅವನಿಗೆ ಹೆಮ್ಮೆ ಇದೆ. ಆದರೆ ಅರಬ್ಬರಿಗೆ ಅವರ ಸುಂದರ ಕುದುರೆಗಿಂತ, ಒಂಟೆಯು ಹೆಚ್ಚು ಉಪಯುಕ್ತ; ಏಕೆಂದರೆ ಅದು ಹೆಚ್ಚು ದೊಡ್ಡದೂ, ಬಲಶಾಲಿಯೂ



Downloaded From: http://iasexamportal.com

Downloaded From: http://iasexamportal.com

ಆಗಿರುತ್ತದೆ. ಒಂದು ಒಂಟೆಯು ಎರಡು ಅಥವಾ ಮೂರು ಕುದುರೆಗಳಿಗಿಂತ ಹೆಚ್ಚು ಭಾರವನ್ನು ಹೊತ್ತು ಒಯ್ಯುತ್ತದೆ. ಮರುಭೂಮಿಯಲ್ಲಿ ಮೈಲುಗಟ್ಟಲೆ ಒಂಟೆಗಳ ಮೇಲೆ ಭಾರತುಂಬಿಸಿ ಅರಬ್ಬನು ಸವಾರಿ ಮಾಡುತ್ತಾನೆ – ಈ ಒಂಟೆಯು – 'ಮರುಭೂಮಿಯ ಹಡಗೋ' – ಎನ್ನುವಂತೆ ! ನಿಜವಾಗಿಯೂ ಒಂಟೆಯನ್ನು ಹಾಗೆಯೇ ಕರೆಯುತ್ತಾರೆ ಕೂಡ !

**Q5. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :** ***20***

Language and communication are something that children learn by talking to one another. But schools consider this an act of indiscipline. Instead, we have a special grammar class to learn language ! One educationist remarked, 'It is nice that children spend just a few hours at school. If they spend all 24 hours in schools, they will turn out to be dumb !' In most schools, teachers talk, children listen. The same is true for other skills also. Children learn a great deal without being taught, by tinkering and pottering on their own.

Changes in the school system, if they are to be of lasting significance, must spring from the actions of teachers in their classrooms, teachers who are able to help children collectively. New programmes, new materials and even basic changes in organisational structure will not necessarily bring about healthy growth. A dynamic and vital atmosphere can develop when teachers are given the freedom and support to innovate. One must depend ultimately upon the initiative and respectfulness of such teachers and this cannot be promoted by prescribing continuously and in detail what is to be done.

In education we can cry too much about money. Sure, we could use more, but some of the best classrooms and schools I have seen or heard of, spend far less per pupil than the average in our schools today. We often don't spend well what money we have. We waste large sums on fancy buildings, unproductive administrative staff, on diagnostic and remedial specialists, on expensive equipment that is either not needed, or underused or badly misused, on tons of identical and dull textbooks, readers and workbooks, and now on latest devices like computers. For much less than what we do spend, we could make our classrooms into far better learning environments than most of them are today.



Downloaded From: http://iasexamportal.com

Downloaded From: http://iasexamportal.com

**Q6.** **(ಅ)** **ಈ ಕೆಳಗಿನ ಪದಗಳು ಕನ್ನಡದ ಯಾವ ಭಾಷಾಸ್ವರೂಪಕ್ಕೆ ಸೇರಿದವುಗಳಾಗಿವೆ ?** *2×5=10*

(i) ಬಿಟ್ಟಾನ್ *2*

(ii) ಬಂದನ್ *2*

(iii) ಬಂದಿಹೆನು *2*

(iv) ನೋಡುತ್ತೇನೆ *2*

(v) ಮಲಗ್ತೇನಿ *2*

**(ಬ)** **ಈ ಕೆಳಗಿನ ಸಂಸ್ಕೃತ ಪದಗಳ ಕನ್ನಡ ಸ್ವರೂಪವೇನು ?** *2×5=10*

(i) ವ್ಯಾಖ್ಯಾನ *2*

(ii) ಸಿಂಹ *2*

(iii) ಪತಿವ್ರತಾ *2*

(iv) ಊರ್ಣ *2*

(v) ವೃಷಭ *2*

**(ಕ)** **ಈ ಕೆಳಗಿನವುಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ :** *2×5=10*

(i) 'ಮಾತ್ರೆ' ಎಂದರೇನು ? *2*

(ii) 'ಯತಿ' ಎಂದರೇನು ? *2*

(iii) 'ಅರಿಸಮಾಸ' ಎಂದರೇನು ? *2*

(iv) 'ಆದೇಶ ಸಂಧಿ'ಯ ಲಕ್ಷಣ *2*

(v) ಕನ್ನಡದ ಎರಡು ಛಂದಸ್ಸಿನ ಹೆಸರುಗಳು *2*

**(ಡ)** **ಈ ಕೆಳಗಿನವುಗಳನ್ನು ಹೇಳಿದ ಕವಿ/ವ್ಯಾಕರಣಕಾರ/ಮೀಮಾಂಸಕರನ್ನು ಗುರುತಿಸಿ :** *2×5=10*

(i) ರಸವೇ ಜನನ, ವಿರಸಮರಣ, ಸಮರಸವೇ ಜೀವನ. *2*

(ii) ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ; ದಾರಿ ಸಾಗುವುದೆಂತೋ ನೋಡಬೇಕು ! *2*

(iii) 'ಪಟಿಗನ್ನಡಮಂ ಪೊಲಗೆಡಿಸಿ ನುಡಿವರ್ ಆಗಮಬಲಹೀನರ್.' *2*

(iv) 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ.' *2*

(v) 'ಸರಳರಗಳೆ' ಯನ್ನು ಪ್ರಯೋಗಿಸಿದ ಕವಿ. *2*



Downloaded From: http://iasexamportal.com




## What you will get:


- 100% G.S. Syllabus Covered
- 8+ Booklets
- More Than 2500+ Pages
- Guidance & Support from Our Experts

## Our Objectives:

- Firstly to cover 100% civil service Mains examination (IAS) syllabus.
- Secondly to compile all the required study materials in a single place, So to save the precious time of the aspirants.

**For More Information Click below Link**

http://iasexamportal.com/civilservices/study-kit/gs-mains




# General Studies Test Series for IAS Mains Examination


## What you will get:

- **Login id & Password for online discussion**
- **Question Papers ( 12 Mock Tests : PDF File )**
- **Evaluated Answer Booklet by experts with proper feedback, comments & guidance.**
- **Answer format ( Synopsis ) of Mock Test paper**
- **Comprehensive analysis of previous year questions &**
- **Mode of Discussion: Email ,Telephonic and Online Discussion**
- **Value Addition material like**

    a. **Current General Studies Magazine**
    b. **Solved papers of General Studies Mains 2013**
    c. **Categorised question papers of last ten years of General Studies Mains Exam**
    d. **Trend Analysis**

## For More Information Click below Link

http://iasexamportal.com/civilservices/test-series/ias-mains-gs




---

# Online Coaching for IAS Mains General Studies I, II, III & IV (Combo)

---

## What you will Get (?)

- **General Studies (Paper – I, II, III & IV) Online 100 % Reading Material of the Syllabus (Which can be saved easily)**
- **Slides (For Giving Summary of Each Topics)**
- **Categorized Unit and Sub-Unit Wise Question Papers of General Studies**
- **Current General Studies Magazine (Indispensable Magazine for General Studies)**
- **Daily Answer Writing Challenge for IAS Mains Contemporary Issues**
- **It is full of tips on areas of emphasis, caution while reading and writing , how to write the answer (?) .**
- **Model Test Question Paper for General Studies - I, II, III and IV for Mains Exam**

- **Online and Telephonic interaction with the course director, and continuous evaluation through a regular online writing session in every chapter and topic.**

## For More Information Click below Link

http://iasexamportal.com/civilservices/courses/ias-mains-gs-combo